ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 34-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರವೀಂದ್ರನಾಥ ಠಾಕೂರ್ ಅವರ ಗೀತಾಂಜಲಿ ಪದ್ಯಗಳಲ್ಲಿ ಭಗವದ್ಚಿತ್ರಣ

**ಡಾ.ಎಂ.ವೈ.ಶಿವರಾಮು**
ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ

**Abstract:**
*ಗೀತಾಂಜಲಿ ಕೃತಿಯು ವಿಶ್ವವಿಖ್ಯಾತಿಯೊಂದಿಗೆ ನೋಬೆಲ್ ಪಾರಿತೋಷಕ ಪಡೆದ, ಜಗತ್ತು ಮೆಚ್ಚಿದ ಕೃತಿ. ಬಂಗಾಳಿ ಹಾಗೂ ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಈ ಕೃತಿ ರಚನೆಯಾಗಿದೆ. ಆದರೆ ಈ ಎರಡೂ ಕೃತಿಗಳೂ ಭಿನ್ನವಾಗಿವೆ. ಅಲ್ಲದೆ ಇವುಗಳು ಜಗತ್ತಿನ ವಿವಿಧ ಭಾಷೆಗಳಿಗೆ ಅನುವಾದಗೊಂಡಿವೆ. ಅಂತೆಯೇ ಕನ್ನಡಕ್ಕೂ ಹಲವರು ಅನುವಾದಿಸಿದ್ದಾರೆ. ಅವು ಭಿನ್ನವಾಗಿ ಮೂಡಿ ಬಂದಿವೆ. ಪ್ರಹ್ಲಾದ ನರೇಗಲ್ಲ ಅವರು ಶಾಂತಿನಿಕೇತನದಲ್ಲಿ ಬಿ.ಎ.ಪದವಿ ಪಡೆದವರು. ಇದರಿಂದಾಗಿ ಬಂಗಾಲಿ ಭಾಷೆ ಇವರಿಗೆ ಕರಗತವಾಗಿತ್ತು. ನೆಲಮೂಲದ ಅರಿವು ಗಾಢವಾಗಿ ತಿಳಿದಿದೆ. ಆದುದರಿಂದಲೇ ಮೂಲ ಬಂಗಾಲಿ ಗೀತಾಂಜಲಿಯ 157 ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಗೀತಾಂಜಲಿ ಎಂದು ನಾಮಕರಣ ಮಾಡಿದ್ದಾರೆ. ಕನ್ನಡದಲ್ಲಿ ಸಮರ್ಥವಾಗಿ ಗೀತಾಂಜಲಿಯ ಪ್ರತಿರೂಪವನ್ನು ಚಿತ್ರಿಸಿ ಮಹದುಪಕಾರ ಮಾಡಿದ್ದಾರೆ. ಆ ಮೂಲಕ ಕನ್ನಡಿಗರು ಗೀತಾಂಜಲಿಯ ನಿನಾದವನ್ನು ಮನದುಂಬಿಕೊಳ್ಳಲು ಸಾಧ್ಯವಾಗಿದೆ.*

**Keywords:** *ಕನ್ನಡ ಸಾಹಿತ್ಯ, ರವೀಂದ್ರನಾಥ ಠಾಕೂರ್, ಗೀತಾಂಜಲಿ, ಕನ್ನಡ ಗೀತಾಂಜಲಿ, ಭಗವದ್ಚಿತ್ರಣ*

## ಪೀಠಿಕೆ

ಠಾಕೂರರು ದೈವಸಿದ್ಧಿ ಪಡೆದವರಾಗಿದ್ದರು ಎಂಬ ನಂಬಿಕೆಯಿದೆ. ಭಗವಂತನ ಲೀಲೆಯನ್ನು ಕಂಡವರಾಗಿದ್ದಾರೆ. ಈ ಕಾರಣದಿಂದಾಗಿಯೇ ತಮ್ಮ ಪದ್ಯಗಳಲ್ಲಿ ಭಗವಂತನನ್ನು ಕುರಿತ ಅನೇಕ ಬಗೆಯ ಸ್ತುತಿಯನ್ನು ಮಾಡಿದ್ದಾರೆ. ಬದುಕು ಭಗವಂತನ ಲೀಲೆಯೆಂದರಿತವರು. ನರೇಗಲ್ಲರು ಗೀತಾಂಜಲಿಯ ಪದ್ಯಗಳನ್ನು ಏಳು ಭಾಗಗಳಾಗಿ ವಿಂಗಡಿಸಿ ಅವುಗಳನ್ನು ಹೆಸರಿಸಿ ಆಯಾ ಭಾಗಗಳಲ್ಲಿ ಬರುವ ಪದ್ಯಗಳನ್ನು ನೀಡಿದ್ದಾರೆ. ಮೊದಲ ಭಾಗವೇ 'ಭಗವತ್–ಪ್ರಾರ್ಥನೆ:ಅಭೀಪ್ಸೆ' ಎಂಬುದಾಗಿದೆ. ಇಷ್ಟಲ್ಲದೆ ಉಳಿದ ಭಾಗಗಳೂ ಭಗವಂತನನ್ನೇ ಕುರಿತು ಬೇರೆ ಬೇರೆ ರೀತಿಯಲ್ಲಿ ಹೇಳುವುದೇ ಆಗಿದೆ. ಶ್ರೀ ರವೀಂದ್ರನಾಥರು ಸಕಲದರಲ್ಲೂ ದೈವವನ್ನೇ ಕಾಣ ಬಲ್ಲವರಾಗಿದ್ದರು. ಎಲ್ಲವೂ ಅವರಿಗೆ ಭಗವದ್ವಿಲಾಸವಾಗಿಯೇ ತೋರುತಿತ್ತು. ಚರಾ ಚರಗಳೆಲ್ಲದರ ಚೈತನ್ಯದಾಯಿ ದೈವವಿಲಾಸ. ದೈವದ ಕಾರಣವೇ ಸಕಲಕ್ಕೂ ಕಾರಣೀಭೂತವಾದುದು. ದೇವರೇ ಸರ್ವಕ್ಕೂ ಕಾರಣಕರ್ತನೆಂದು ನಂಬಿದ್ದರು. ಲೋಕಾಂತದಲ್ಲಿ ಹಾಗೂ ಏಕಾಂತಲ್ಲಿ ಈ ಎರಡರಲ್ಲೂ ಭಗವಂತನನ್ನೇ ಸದಾ ಧ್ಯಾನಿಸುತಿದ್ದರು. ಅಂತರಗವನ್ನು ಅರಳಿಸಲು ಭಗವಂತನ ಕೃಪೆ ಅತ್ಯಗತ್ಯ ಎಂದು ಅಚಲವಾಗಿ ನಂಬಿಕೊಂಡಿದ್ದರು.

**Please cite this article as:** ಶಿವರಾಮು, ಎಂ.ವೈ.. (2026). ರವೀಂದ್ರನಾಥ ಠಾಕೂರ್ ಅವರ ಗೀತಾಂಜಲಿ ಪದ್ಯಗಳಲ್ಲಿ ಭಗವದ್ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 34–38

ಭಗವಂತ ನವನವ ರೂಪದಲ್ಲಿ ಬರುತ್ತಾನೆ. ಆತ ಹೇಗೆ ಯಾವ ರೂಪದಲ್ಲಿ ಎದುರಾಗುವನೆಂಬುದು ತಿಳಿಯುವುದಿಲ್ಲ. ದೇವರು ಬಂದರೆ ನಮ್ಮಲ್ಲಿ ಪುಳಕವನ್ನು ಉಂಟು ಮಾಡುತ್ತಾನೆ. ಈ ಜಗತ್ತಿನ ಎಲ್ಲರನ್ನೂ, ಎಲ್ಲವನ್ನೂ ಕಾಪಾಡುವವನು ಭಗವಂತ. ಅವನ ಕೃಪೆ ಇಲ್ಲದಿದ್ದರೆ ಏನೊಂದೂ ನಡೆಯದು.

***ತಾಯೆ ನಿನ್ನಯ ಅಮೃತವಾಣಿಯು ಸಾವ ಜೈಸುವುದು***
***ಮಾಯೆಯಿಂದಲಿ ಶಾಂತ ಗಗನದಿ ತುಂಬಿ ಸೂಸುವುದು!*** (ಮಾತೃಕೃಪೆ)

ದೇವರ ದಯೆ ನಮ್ಮೆಲ್ಲರನ್ನೂ ಕಾಪಾಡುತಿದೆ. ದೈವೀಶಕ್ತಿ ನಮ್ಮನ್ನು ಪೊರೆಯುತ್ತಿದೆ. ಸಾವನ್ನೂ ಜೈಸುವ ಶಕ್ತಿ ದೈವಕ್ಕಿದೆ. ನಮ್ಮ ಅನೇಕ ಪುರಾಣ ಕಥೆಗಳು ಇದನ್ನು ಪುಷ್ಟೀಕರಿಸುತ್ತವೆ. ಸತಿಸಾವಿತ್ರಿ ಕಥೆ, ಕುಂಬಾರಗುಂಡಯ್ಯನ ಕಥೆ, ಇಳೆಯಾಂಡ ಗುಡಿಮಾರನ ಕಥೆ, ಭಕ್ತ ಸಿರಿಯಾಳನ ಕಥೆ ಇನ್ನೂ ಮುಂತಾಗಿ ಹಲವು ಪುರಾಣ ಕಥೆಗಳು ಮನುಷ್ಯ ಬದುಕುವುದಕ್ಕೆ ದೈವಬಲ ಬೇಕೆಂಬುದನ್ನೇ ಹೇಳುತ್ತವೆ. ದೈವಕೃಪೆ ಇದ್ದರೆ ಸಾವೂ ಕೂಡ ನಮ್ಮ ಹತ್ತಿರ ಸುಳಿಯಲಾರದು. ಅಲ್ಲದೆ ದೇವತಾ ಸ್ತುತಿ ನಮ್ಮನ್ನು ಯಾವಾಗಲೂ ಎಚ್ಚರದಿಂದಿರುವಂತೆ ಮಾಡುವುದಲ್ಲದೆ ಅನಾಚಾರ ಮಾಡದಂತೆ ತಡೆಯುತ್ತದೆ. ಅಲ್ಲದೆ ಸದಾಚಾರವಂತರನ್ನಾಗಿ ಮಾಡುತ್ತದೆ. ದೇವರ ಇರುವಿಕೆ ದೃಗೋಚರಗೊಳ್ಳುವುದಿಲ್ಲ. ಬಸವಣ್ಣನವರು ಹೇಳುವಂತೆ ನಮ್ಮ ನಡೆನುಡಿಗಳು ಮನುಷ್ಯತ್ವವನ್ನು ಪ್ರತಿಬಿಂಬಿಸುತ್ತವೆ. ತಂದೆ ತಾಯಿಗಳಲ್ಲಿ ದೈವತ್ವ ಕಾಣುವ ಪರಿಪಾಠವಿದೆ. ಅದರಲ್ಲೂ ತಾಯಿಗೆ ಇನ್ನಿಲ್ಲದ ಪ್ರಾಶಸ್ತ್ಯವಿದೆ. ಆಕೆಯನ್ನು ಸದಾ ಪೂಜನೀಯ ಭಾವನೆಯಿಂದ ಕಾಣುತ್ತೇವೆ. ಆಕೆಯ ಮಾತುಗಳು ಅಮೃತದಂತೆ ಸವಿಯಾಗಿರುತ್ತವೆ. ಆಕೆಯ ನುಡಿಗಳು ನವಚೈತನ್ಯವನ್ನು ಉಂಟು ಮಾಡುತ್ತವೆ. ತಾಯಿಯ ಮಾತು ಶಕ್ತಿಯನ್ನು ಕರುಣಿಸುತ್ತದೆ. ಈ ಭೂಮಿ ಆಕಾಶದ ಕಾರ್ಯನಿರ್ವಹಣೆಯೇ ಇದನ್ನು ಸಾಕ್ಷೀಕರಿಸುತ್ತದೆ. ದೇವನಿಲ್ಲ ಎಂದು ಎಷ್ಟೇ ವಾದಿಸಿದರೂ ತಾಂತ್ರಿಕವಾಗಿ ಎಷ್ಟೇ ಮುಂದುವರಿದಿದ್ದರೂ ಸಾವನ್ನು ಗೆಲ್ಲಲಾಗದ, ಪ್ರಾಕೃತಿಕ ವಿಕೋಪಗಳನ್ನು ತಡೆಯಲಾಗದ, ಕೆಲವು ಸೃಷ್ಟಿಗಳ ಅಂತರಂಗವನ್ನು ಅರಿಯಲಾಗದ ಇಂತಹವುಗಳೇ ದೈವದ ಇರುವಿಕೆಯನ್ನು ಅರಹುತ್ತದೆ. ಕನಕದಾಸರು ಹೇಳುವಂತೆ ನೀ ಮಾಯೆಯೋ ನಿನ್ನೊಳು ಮಾಯೆಯೋ ಎಂಬಂತೆ ದೈವ ಎಂಬುದು ಅದೃಶ್ಯವಾದುದು. ದೈವ ಎಂಬುದು ಅನಂತವಾದುದು. ಅದು ಗಗನ, ಭೂಮಿಯಷ್ಟೇ ವಿಸ್ತಾರತೆಯನ್ನು ಹೊಂದಿದೆ. ಅದು ನಮ್ಮ ಅರಿವಿಗೆ ಬರುವಂತಹುದಲ್ಲ. ಅದನ್ನು ನಮ್ಮ ಸದ್ಗುಣಗಳ, ಸದಾಚಾರಗಳ ಮೂಲಕ ಆಗು ಮಾಡಿಕೊಳ್ಳಬೇಕು.

***ಧರೆಯ ತುಂಬಾ ಇರುವ ಅಂಬಾ! ಮಣಿವನಲಸದಲೆ***
***ತ್ವರದಿ ಮಣಿವೆನು ಬಾಳಿನೆಲ್ಲಾ ಕೆಲಸಕೆಲಸದೊಳೆ!*** (ಮಾತೃಕೃಪೆ)

ಹಸು ಹಿಂದೂಗಳಿಗೆ ಪೂಜನೀಯವಾದುದು. ಸಕಲ ಜೀವಜಂತುಗಳಿಗೂ ಅವುಗಳು ನೆಲೆಗೊಂಡಿರುವಲ್ಲಿ ಆಹಾರಾದಿಗಳನ್ನು ಕರುಣಿಸಿ ಪೊರೆಯುವವನು ಭಗವಂತ. ಇಂತಹ ಭಗವಂತನ ಕರುಣೆಯನ್ನು ಮಾನವ ಸ್ಮರಿಸಿಕೊಂಡು ಆರಾಧಿಸಬೇಕು. ತಾನು ಮಾಡುವ ಕೆಲಸದಲ್ಲೂ ಭಗವಂತನನ್ನು ಕಾಣಬೇಕು. ಸದಾ ಭಗವಂತನ ಸ್ಮರಣೆ ಮನುಷ್ಯನಲ್ಲಿ ಆನಂದವನ್ನು ಉಂಟು ಮಾಡುತ್ತದೆ. ಬದುಕು ಸುಗಮವಾಗಿ ಸಾಗುತ್ತದೆ.

***ನಿನ್ನ ಪೂಜೆಯ ಸುರಭಿಧೂಪದಿ ಭಕ್ತಿ ಪಾವನವು***
***ನನ್ನ ತನುವೂ ಮನವು ಧನವೂ ಇದೊ ನಿವೇದನವು!*** (ಮಾತೃಕೃಪೆ)

ಭಗವಂತ ಭಕ್ತನಿಂದ ಧೂಪಾದಿ ಪೂಜಾ ಸಾಮಗ್ರಿಗಳು ಮತ್ತು ಭಕ್ತಿಯನ್ನು ಹೊರತು ಪಡಿಸಿ ಮತ್ತೇನನ್ನೂ ಬಯಸುವುದಿಲ್ಲ. ಭಕ್ತನು ದೇವರನ್ನು ಪ್ರಾರ್ಥಿಸುತ್ತಾ ಭಕ್ತಿ ಸಮರ್ಪಿಸಿ ಪುನೀತ ಭಾವವನ್ನು

ಪಡೆಯಬೇಕು. ದೈವಕ್ಕೆ ಸಕಲವನ್ನು ಸಮರ್ಪಿಸಿ ಧನ್ಯತೆ ಹೊಂದಬೇಕು. ನನ್ನನ್ನು ತನ್ನಲ್ಲಿ ಅರ್ಪಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತಾರೆ. ಇಲ್ಲಿ ತಾಯಿ ಮತ್ತು ದೈವ ಎರಡೂ ಅಬೇಧ್ಯವಾದವೆಂಬುದನ್ನು ಅರಹುತ್ತಾರೆ.

***ದುಃಖದ ತಾಪದಿ ಬೆಂದಿಹ ಚಿತ್ತಕೆ ಸಾಂತ್ವನವೂ ಬೇಕಿಲ್ಲಾ!***

***ದುಃಖವ ಗೆಲ್ಲುವ ಶಕುತಿಯು ಇರಲೈ ಇದ್ದರದುವೆ ಸಾಕಲ್ಲಾ!*** (ಪೌರುಷದ ಪ್ರಾರ್ಥನೆದಿ)

ಇಲ್ಲಿ ಇಲ್ಲ ಮತ್ತು ಅಲ್ಲ ಎಂಬ ನಿಷೇಧಾತ್ಮಕ ಪದದ ಮೂಲಕವೇ ದೈವ ಪ್ರೇರಣೆ ಹೇಗಿರಬೇಕು ಎಂದು ತಿಳಿಸುತ್ತಾರೆ. ನೇತ್ಯಾತ್ಮಕವಾದುದರಿಂದಲೇ ಧನಾತ್ಮಕವಾದುದನ್ನು ಕಾಣುವ ಬಗೆ ವಶೇಷವಾದುದು. ದೈವ ಶಕ್ತಿ ನಮ್ಮೊಡನಿದ್ದರೆ ಎಲ್ಲವೂ ಇದ್ದ ಹಾಗೆಯೇ ಎನ್ನುತ್ತಾರೆ. ಭಗವಂತ ಏನನ್ನಾದರೂ ಕರುಣಿಸಲಿ, ಯಾವುದೇ ಸಮಸ್ಯೆ ಎದುರಾಗಲಿ ಅದನ್ನು ಗೆಲ್ಲುವ ಶಕ್ತಿ ಇದ್ದರೆ ಅದಾವುದೂ ಗಣಿತವಲ್ಲ ಎನ್ನುತ್ತಾರೆ. ಮನುಷ್ಯನಾದ ಮೇಲೆ ಸುಖ–ದುಃಖ ಸಹಜವಾದುದು. ನಮ್ಮ ಕವಿಗಳು ಹೇಳುವಂತೆ 'ರಸವೇ ಜನನ ವಿರಸ ಮರಣ, ಸಮರಸವೇ ಜೀವನ' ಎಂಬಂತೆ ಸಮಸ್ಯೆಗಳನ್ನೇ ನೀಡಬೇಡ ಎನ್ನದೆ ಅವುಗಳನ್ನು ನಿವಾರಿಸುವ ಶಕ್ತಿಯನ್ನು ನೀಡಬೇಕೆಂದು ಪ್ರಾರ್ಥಿಸುತ್ತಾರೆ. ಪ್ರಾಸ ಪದ್ಯದ ಸೊಗಸನ್ನು ಹೆಚ್ಚಿಸಿದೆ.

***ಯಾರೂ ನೆರವಿಗೆ ಬರದಿರೆ ಒಳಿತೇ ಕುಸಿಯದಿರಲಿ ಈ ಬಲವು!***

***ತೀರ ಮೋಸವದು ಬಾಳಲಿ ಒದಗಿರೆ ಹುಸಿಗೊಳದಿರಲೈ ಒಲವು!*** (ಪೌರುಷದ ಪ್ರಾರ್ಥನೆದಿ)

ದೈವ ಬಲ ಕಡಿಮೆಯಾದರೆ ಮನುಷ್ಯ ಬಾಳುವುದು ಕಷ್ಟವಾಗುತ್ತದೆ. ದೈವದ ನೆರವಿದ್ದರೆ ಯಾವ ವಿಪತ್ತನ್ನೂ ಎದುರಿಸಿ ಚದುರಿಸಬಹುದು. 'ಧೈರ್ಯಂ ಸರ್ವತ್ರ ಸಾಧನಂ' ಎಂಬಂತೆ ಎಲ್ಲವನ್ನೂ ಎದುರಿಸಲು ಆತ್ಮಬಲ ಅತ್ಯಗತ್ಯವಾದುದು. ದೇಹ ಬಲಕ್ಕಿಂತ ಆತ್ಮಬಲ ಶಕ್ತಿಯುತವಾದುದು. ಅದಕ್ಕಾಗಿಯೇ 'ಶಕ್ತಿಗಿಂತ ಯುಕ್ತಿ ಮೇಲು' ಎಂಬ ಮಾತು ಜನಜನಿತವಾಗಿದೆ. ಪ್ರೀತಿಗೆ ಜಗತ್ತನ್ನೇ ಗೆಲ್ಲುವ ಶಕ್ತಿ ಇದೆ. ಇದರಿಂದಾಗದುದು ಯಾವುದೂ ಇಲ್ಲ. ಜಗತ್ತನ್ನೇ ಬಂಧಿಸಿರುವುದು ಪ್ರೀತಿ. ಇದು ಹುಸಿಯಾಗಬಾರದು. ಇದು ಹುಸಿಯಾದರೆ ಅನಾಹುತ ಖಂಡಿತ. ಇಲ್ಲಿ ಬಂದಿರುವ ಅಂತ್ಯ ಪ್ರಾಸ ಈ ಸಾಲುಗಳ ಸೊಗಸನ್ನು ಇಮ್ಮಡಿಗೊಳಿಸಿದೆ. ಬಲಕ್ಕೆ ಒಲವು ಒತ್ತಾಸೆಯಾಗಿರುತ್ತದೆ.

***ನನ್ನನು ನೀನೆ ಉದ್ಧರಿಸೆಂಬುದು ನನ್ನ ಪ್ರಾರ್ಥನೆಯೆ ಅಲ್ಲಾ!***

***ತನ್ನ ಸಂಕಟವನೀಸಿ ಜೈಸುವಾ ಕಸುವು ಇರಲಿ ಒಳಗೆಲ್ಲಾ!*** (ಪೌರುಷದ ಪ್ರಾರ್ಥನೆದಿ)

ಆತ್ಮೋದ್ಧಾರವಾಗದ ಹೊರತು ಯಾರೂ ಉದ್ಧಾರವಾಗಲಾರರು. ಯಾರೂ ತಮ್ಮ ಉದ್ದಾರಕ್ಕಾಗಿ ಯಾರ ಮೇಲೂ ಅವಲಂಬಿತರಾಗಬಾರದು. 'ಆಳು ಮಾಡಿದುದು ಆಳು, ಮಗ ಮಾಡಿದುದು ಮಧ್ಯಮ, ತಾನು ಮಾಡಿದುದು ಉತ್ತಮ' ಎಂಬ ಜನಪದರ ನುಡಿ ಇದನ್ನೇ ಹೇಳುತ್ತದೆ. ಅದು ಕೇವಲ ಬೆಳವಣಿಗೆಯಷ್ಟೇ ಎಂಬುದನ್ನು ಈ ಸಾಲುಗಳು ಧ್ವನಿಸುತ್ತವೆ. ಎಲ್ಲಾ ಹೊಣೆಗಾರಿಕೆಯನ್ನು ದೇವರ ಮೇಲೇ ಏರುವುದು ಉಚಿತವಾದುದಲ್ಲ. ಅವರವರ ಉದ್ಧಾರ ಅವರವರಿಗೆ ಸಲ್ಲುತ್ತದೆ. ' ಸಮಸ್ಯೆಗಳು ಮನುಷನಿಗೆ ಬರದೆ ಮರಕ್ಕೆ ಬಂದದೆ' ಎಂಬುದು ನಮ್ಮ ಜನಪದರ ಆಂಬೋಣ. ಯಾವುದೇ ಸಮಸ್ಯೆ ಸವಾಲುಗಳನ್ನು ಎದುರಿಸುವ ಸ್ಥೈರ್ಯವನ್ನು ಹೊಂದಬೇಕು. ಧೈರ್ಯದಿಂದ ಸಮಸ್ಯೆಗಳನ್ನು ಎದುರಿಸಲಾಗದಿದ್ದರೆ ಅವೇ ನಮ್ಮನ್ನು ಎದುರಿಸಿ ಬಿಡುತ್ತದೆ. ಅದಕ್ಕಾಗಿ ಸಂಕಟವನ್ನ ಈಜಿ ಜೈಸುವ ಕಸುವಿದ್ದರೆ ಎಲ್ಲವನ್ನೂ ಮೆಟ್ಟಿ ಸದೃಢವಾಗಿ ನಿಲ್ಲಬಹುದು. ಭಗವಂತ ಕೇವಲ ಸ್ಥೈರ್ಯವನ್ನು

ನೀಡಿದರೆ ಅಷ್ಟೇ ಸಾಕು ಮತ್ತೇನು ಬೇಕಿಲ್ಲ ಎನ್ನುತ್ತಾರೆ.

***ನನ್ನ ಹೊಣೆಯ ಹೊರೆ ಹಗುರುಗೊಳಿಸುತಿಹ ಸಾಂತ್ವನವೂ ಬೇಕಿಲ್ಲಾ!***

***ತನ್ನ ಹೊಣೆಯ ಹೊರೆ ತಾನೇ ಹೊರುತಿಹೆ ಹುಮ್ಮಸವೇ ಸಾಕಲ್ಲಾ!*** (ಪೌರುಷದ ಪ್ರಾರ್ಥನೆದಿ)

'ಬಂದದ್ದೆಲ್ಲವೂ ಬರಲಿ ಭಗವಂತನ ದಯೆ ಒಂದಿರಲಿ' ಎಂಬಂತೆ ಭಗವಂತನ ದಯೆ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು. ಭಗವದ್ಕೃಪೆ ಇದ್ದಲ್ಲಿ ಸಂಕಟದಿಂದ ದೂರಾಗಬಹುದು. ಬದುಕು ಹಗುರವಾಗಿ ಸುಂದರತೆಯನ್ನು ಹೊಂದಿ ಸೊಗಸನ್ನು ಹೊಂದುತ್ತದೆ. 'ಸಂಕಟ ಬಂದಾಗ ವೆಂಕಟರಮಣ' ಎನ್ನುವ ಬದಲು ಸದಾ ಭಗವಂತನ ಕಡೆಗೆ ನಮ್ಮ ಮನವಿರಬೇಕು. ಬಸವಣ್ಣನವರು ಹೇಳುವಂತೆ ಕಾಯಕದಲ್ಲಿ ಕೈಲಾಸವನ್ನು ಕಾಣಬೇಕು. ತನ್ನ ತನುವ ತಾನೇ ಸಂತೈಸಿಕೊಳ್ಳಬೇಕು. ತನ್ನ ಬದುಕಿನ ಬಂಡಿಯನ್ನು ತಾನೇ ಎಳೆಯಬೇಕು. ಮೊದಲು ನಾವು ಶುದ್ಧೀಕರಣ ಹೊಂದಬೇಕು. ಎಲ್ಲರೂ ತಮ್ಮನ್ನು ತಾವು ಅರಿತುಕೊಂಡು ಸರಿದಾರಿಯಲ್ಲಿ ನಡೆದಾಗ ಎಲ್ಲವೂ ಸರಿಯಾಗಿಯೇ ಇರುತ್ತದೆ. ಅದರಲ್ಲಿಯೇ ಸಂತೃಪ್ತಿ ಹೊಂದಬೇಕು. ಪ್ರತಿಯೊಬ್ಬರೂ ಅವರ ಅಂತರಾತ್ಮದ ಆತ್ಮಸಾಕ್ಷಿ ಅನುಗುಣವಾಗಿ ನಡೆದಾಗ ಎಲ್ಲವೂ ಸರಿ ದಾರಿಯಲ್ಲೇ ನಡೆಯುತ್ತದೆ. ಅಪಘಾತವಾಗದಂತೆ ಎಚ್ಚರ ವಹಿಸುವುದು ಎಷ್ಟು ಮುಖ್ಯವೋ ಅಂತೆಯೇ ಬದುಕಿನಲ್ಲಿ ಅಪರಾಧಗಳಾಗದಂತೆ ಅವರವರೇ ಎಚ್ಚರ ವಹಿಸಿದರೆ ಅಪರಾಧಗಳಿಗೆ ಅವಕಾಶವೇ ಇರುವುದಿಲ್ಲ.

***ಶಿರವು ಬಾಗಿರಲಿ ಸೊಗದ ಹೆಗಲಿನಲಿ ನಿನ್ನ ಗುರುತು ನನಗಿರಲಿ!***

***ಕೊರಗಿನಿರುಳಿನಲಿ ಜಗವೇ ವಂಚಿಸೆ ಶಂಕೆ ನಿನ್ನೊಳಿರದಿರಲಿ!*** (ಪೌರುಷದ ಪ್ರಾರ್ಥನೆದಿ)

ಮನುಷ್ಯನಾದವನು ತಗ್ಗಿ ಬಗ್ಗಿ ಬಾಳಬೇಕು. ಆಗಲೇ ನೆಮ್ಮದಿಯ ಬದುಕನ್ನು ಕಾಣಲು ಸಾಧ್ಯವಾಗುತ್ತದೆ. ಪ್ರೀತಿಯಿಂದ ಪ್ರೀತಿಯನ್ನು ಗೆಲ್ಲಬಹುದೇ ಹೊರತು ದ್ವೇಷದಿಂದ ಏನನ್ನೂ ಸಾಧಿಸಲಾಗದು. ಕಿಚ್ಚು ಮೊದಲು ತಾನಿರುವ ಜಾಗವನ್ನು ಸುಡುವಂತೆ ಹಗೆತನ ಮೊದಲು ನಮ್ಮನ್ನೇ ನಾಶ ಮಾಡುತ್ತದೆ. ನೆಮ್ಮದಿಯ ಜೀವನಕ್ಕೆ ಶಾಂತತೆ ಸಮಾಧಾನ ಬೇಕು. ಇದರಿಂದ ಸ್ವರ್ಗದಂತಹ ಜೀವನ ಪಡೆಯಬಹುದು. ನಾವು ಮಾಡುವ ಕೈಂಕರ್ಯದಲ್ಲಿ ಖಚಿತತೆ ಇರಬೇಕು. ಜಗತ್ತಿನ ಬಗ್ಗೆ ಮಾತನಾಡುವ ಮೊದಲು ನಾನು ಸರಿ ದಾರಿಯಲ್ಲಿ ನಡೆಯುತಿದ್ದೇನೆಯೇ ಎಂಬುದನ್ನು ಮನಗಾಣಬೇಕು. ಜಗತ್ತಿನ ಬಗ್ಗೆ ತಲೆಕೆಡಿಸಿಕೊಳ್ಳದೆ ತನ್ನನ್ನು ತಾನು ತಿಳಿದುಕೊಂಡು ಮುನ್ನಡೆಯಬೇಕು.

ರವೀಂದ್ರನಾಥ ಠಾಕೂರ್ ಅವರು ತಮ್ಮ ಅಂತರಾತ್ಮದ ನಿವೇದನೆಯನ್ನು ಗೀತಾಂಜಲಿ ಪದ್ಯಗಳ ಮೂಲಕ ಭಗವಂತನಿಗೆ ಸಮರ್ಪಿಸಿದ್ದಾರೆ. ಭಗದ್ ಲೀಲೆಯು ಅದ್ಭುತವೂ, ರಮಣೀಯವೂ, ಅಗಾಧವಾದುದು ಎಂಬುದು ಇವರ ಮನದಿಚ್ಛೆಯಾಗಿದೆ. ಇವರು ಇಲ್ಲಿ ಭಗವದ್ ವಿಲಾಸದ ಭವ್ಯತೆಯನ್ನು ನಮ್ಮ ಕಣ್ಮುಂದೆ ತೆರೆದಿಡುತ್ತಾರೆ. ಭಗವಂತನ ನಾನಾ ರೀತಿಗಳನ್ನು ಹಲವು ಧ್ವನತ್ಯಾತ್ಮಕ ಉಪಮೆ ರೂಪಕಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ದೈವಸಿದ್ಧಿ ಸಾಕ್ಷಾತ್ಕಾರಗಳ ಅನುಭವಗಳು ಇಲ್ಲಿ ಪಡಿಮೂಡಿವೆ. ಭಾಗವತ ಧರ್ಮವನ್ನು ಭಕ್ತಿರಸ ಹಾಗೂ ಜ್ಞಾನ–ಕರ್ಮಗಳೊಡನೆ ಸಮನ್ವಯಗೊಳಿಸಿ ಅಭಿವ್ಯಕ್ತಿಸಿದ್ದಾರೆ. ಗೀತಾಂಜಲಿಯ ಅನಂತತೆ ಕನ್ನಡ ಗೀತಾಂಜಲಿಯಲ್ಲೂ ಒಡಮೂಡಿ ಕನ್ನಡಿಗರಿಗೆ ರಸದೌತಣವನ್ನು ನೀಡಿದೆ.

**ಆಕರ ಗ್ರಂಥ**


- ಪ್ರಹ್ಲಾದ ನರೇಗಲ್ಲ. (2011). *ಕನ್ನಡ ಗೀತಾಂಜಲಿ.* ಸಾಹಿತ್ಯ ಪ್ರಕಾಶನ.

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗುಡೋಣಿ. (2014). *ತತ್ವಪದಗಳ ಸಾಹಿತ್ಯ ಅಧ್ಯಯನ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ
- ಕೀರ್ತಿನಾಥ ಕುರ್ತುಕೋಟಿ. (2015). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್.